Q.P. Sl. No. :

A

ಜುಲೈ 2024-2025 ರ ಪರೀಕ್ಷೆ-3
JULY 2024-2025 EXAMINATION-3

[ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12

[Total No. of Printed Pages : 12

[ಒಟ್ಟು ಪ್ರಶ್ನೆಗಳ ಸಂಖ್ಯೆ : 38

[Total No. of Questions : 38

CCE RR/PR/PF
Revised Syllabus

ಸಂಕೇತ ಸಂಖ್ಯೆ : 33-K **Code No. : 33-K**

ವಿಷಯ : ದ್ವಿತೀಯ ಭಾಷೆ — ಕನ್ನಡ

Subject : Second Language — KANNADA

(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ)

(Regular Repeater / Private Repeater / Private Fresh)

ದಿನಾಂಕ : 08. 07. 2025] [Date : 08. 07. 2025

ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-00 ರವರೆಗೆ] [Time : 10-00 A.M. to 1-00 P.M.

ಗರಿಷ್ಠ ಅಂಕಗಳು : 80] [Max. Marks : 80

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ).*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ (Version) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಇವೆರಡೂ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

Cut here/ಇಲ್ಲಿ ಕತ್ತರಿಸಿ

CCE RR/PR/PF

TEAR HERE TO OPEN THE QUESTION PAPER WITH REVERSE JACKET
ಹಿಮ್ಮುಖ ಜಾಕೆಟ್ ಹೊಂದಿರುವ ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here/ಇಲ್ಲಿಂದ ಕತ್ತರಿಸಿ

Tear here/ಇಲ್ಲಿಂದ ಕತ್ತರಿಸಿ

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : **4 × 1 = 4**

1. 'ಕರ್ನಾಟಕ' ಪದವು ನಾಮಪದದ ಈ ಪ್ರಕಾರಕ್ಕೆ ಉದಾಹರಣೆಯಾಗಿದೆ

(ಎ) ರೂಢನಾಮ

(ಬಿ) ಸರ್ವನಾಮ

(ಸಿ) ಅಂಕಿತನಾಮ

(ಡಿ) ಅನ್ವರ್ಥನಾಮ

2. 'ನಳಿನ ಪುಸ್ತಕವನ್ನು ಓದುತ್ತಿದ್ದಾಳೆ' – ಈ ವಾಕ್ಯವಿರುವ ಕಾಲ

(ಎ) ಭೂತಕಾಲ

(ಬಿ) ವರ್ತಮಾನ ಕಾಲ

(ಸಿ) ಭವಿಷ್ಯತ್ ಕಾಲ

(ಡಿ) ಸಕಾಲ

CCE RR/PR/PF

3. ಕ್ರಿಯಾ ಸಮಾಸಕ್ಕೆ ಉದಾಹರಣೆಯಾಗಿರುವ ಪದವಿದು

(ಎ) ಅರಮನೆ

(ಬಿ) ವನಜಮುಖಿ

(ಸಿ) ಹೆಗ್ಗುರಿ

(ಡಿ) ಸ್ನಾನ ಮಾಡು

4. ಅನುಕರಣಾವ್ಯಯ ಪದವಿದು

(ಎ) ಜುಳುಜುಳು

(ಬಿ) ಕಟ್ಟಕಡೆ

(ಸಿ) ಫಲ ಪುಷ್ಪ

(ಡಿ) ಕತ್ತಿಮಸೆ

II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 12 × 1 = 12

5. ಅಸಿ-ಮಸಿ ಎಂದರೇನು ?

6. ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?

7. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?

8. ಗಂಗಾನದಿಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು ?

9. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?

10. ಲೇಖಕರು ಹೇಳುವಂತೆ ನಮ್ಮ ಹಿರಿಯರು ನಮಗೆ ಏನು ಕಾಣಿಸಿದ್ದಾರೆ ?

11. ಹಾ.ಮಾ. ನಾಯಕರು ಹೇಳುವಂತೆ ನಮ್ಮ ದೈನಂದಿನ ಬದುಕಿನಲ್ಲಿ ಅಪರೂಪವಾಗಿರುವುದು ಏನು ?

12. ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು ?

13. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ ?

CCE RR/PR/PF

14. ತಿಮಿರಕ್ಕೆ ವೈರಿ ಯಾವುದು ?

15. ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ ?

16. ಭಾವ ಬಣ್ಣದ ಸೀರೆಯನ್ನು ಏಕೆ ತಂದನು ?

III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **8 × 2 = 16**

17. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?

18. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

19. ಹರಿದ್ವಾರಕ್ಕೆ 'ಕಪಿಲಸ್ಥಾನ' ಎಂಬ ಹೆಸರು ಹೇಗೆ ಬಂದಿತು ?

20. ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಢಾರ್ಥವೇನು ?

21. ಕುಣಿಗಲ್ ಕೆರೆಯಲ್ಲಿ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?

22. 'ಕಾದುನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು ?

CCE RR/PR/PF

23. ಕವಯಿತ್ರಿ ಡಾ. ಎಚ್.ಎಲ್. ಪುಷ್ಪ ಅವರು ಹೇಳುವಂತೆ ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ ?

24. ಶಂಕರಾಚಾರ್ಯರ ಶಿಷ್ಯನು 'ಪದ್ಮ ಪಾದಚಾರ್ಯ'ನಾಗಿ ಹೆಸರಾದ ಪ್ರಸಂಗವನ್ನು ವಿವರಿಸಿ.

IV. ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : **1 × 3 = 3**

25. ಸಿ.ಪಿ. ಕೃಷ್ಣಕುಮಾರ್

V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : **1 × 3 = 3**

26. ಯುಗದ ಆದಿಯು ಬಂತು ಸೊಗದ ಸುಗ್ಗಿಯ ತಂತು
ಜಗಕೆಲ್ಲ ಹೊಸ ಕಳೆಯು ತುಂಬಿತೆಂತು !
ಬಗೆ ಬಗೆಯ ಬಣ್ಣಗಳ ಬರೆದ ಚಿತ್ರದ ಹಾಗೆ
ನೆಲದಮ್ಮ ನವವಧುವೆ ಆದಳಿಂತು !

VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : **1 × 3 = 3**

27. "ಸಗ್ಗದಕ್ಕಿಯ ಗೂಡು ಬಟ್ಟಲಿನಂತೆ ಸುಂದರವಾಗಿದೆ."

CCE RR/PR/PF

VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : **1 × 3 = 3**

28. ಅತಿ ಆಸೆ ಗತಿಗೇಡು.

ಅಥವಾ

ಒಗ್ಗಟ್ಟಿನಲ್ಲಿ ಬಲವಿದೆ.

VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : **5 × 3 = 15**

29. "ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು."

30. "ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ."

31. "ಅಮ್ಮನ ಮಾತು ಸುಳ್ಳಾಗಲಾರದು."

32. "ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು."

33. "ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ."

IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 × 4 = 4**

34. ಉಳ್ಳವರು ಶಿವಾಲಯವ ಮಾಡುವರು !

.....

.....

.....

.....

ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ !

ಅಥವಾ

CCE RR/PR/PF

ಬೆಟ್ಟದ ಮೇಲೊಂದು ಮನೆಯ ಮಾಡಿ

.....

.....

.....

.....

ಬಂದಡೆ ಮನದಲ್ಲಿ ಕೋಪದ ತಾಳದೆ ಸಮಾಧಾನಿಯಾಗಿರಬೇಕು.

X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

35. ಗಿಳಿಯು ಪರಹಿತಾಕಾಂಕ್ಷಿ ಎನಿಸಿಕೊಂಡದ್ದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ಬರೆಯಿರಿ.

ಅಥವಾ

'ಗಿಳಿಯ ವರ್ತನೆಯು ಮಾನವನಿಗೆ ಆದರ್ಶಪ್ರಾಯವಾಗಿದೆ.' ಎಂಬುದನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿ ಬರೆಯಿರಿ.

XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

1 × 4 = 4 (2 + 2)

36. ಭರತ ಭೂಮಿಯ ಪುಣ್ಯ ಪುರುಷರಲ್ಲಿ ಶಿಶುನಾಳ ಶರೀಫ ಸಾಹೇಬರು ಒಬ್ಬರಾಗಿದ್ದಾರೆ. ಜಾನಪದದ ಪ್ರತಿನಿಧಿಯಾದ ಈ ಸಂತ ಕವಿ ಸಾಮಾನ್ಯ ಮಾನವನಿಗೂ ಅರ್ಥವಾಗುವಂತೆ ಮಾನವತೆಯ ತತ್ತ್ವ ಬೋಧನೆ ಮಾಡಿದ್ದಾರೆ. ಶರೀಫ ಸಾಹೇಬರು ೧೯ನೆಯ ಶತಮಾನದಲ್ಲಿ ಆಗಿ ಹೋದ ಅನುಭಾವಿಗಳು. ಅವರು ಶಿಶುನಾಳ ಎಂಬ ಗ್ರಾಮದಲ್ಲಿ ಜನಿಸಿದರು. ಶಿಶುನಾಳವು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಒಂದು ಸಣ್ಣ ಗ್ರಾಮ. ಶರೀಫರ

CCE RR/PR/PF

ಬಾಲ್ಯ ಇಲ್ಲಿಯೇ ಕಳೆಯಿತು. ಅವರ ಪ್ರಾಥಮಿಕ ಶಿಕ್ಷಣದ ವಿದ್ಯಾಭ್ಯಾಸವು ಇಲ್ಲಿಯೇ ಆಯಿತು. ಮೊದಲು ಅವರು ಕನ್ನಡ ಕೂಲಿಮಠದಲ್ಲಿ ಓದಿದರು. ಶರೀಫರ ವಿದ್ಯಾಭ್ಯಾಸವು ಕನ್ನಡ ಮುಲ್ಕಿಯವರೆಗೆ ಮಾತ್ರ ಆಯಿತು. ಆದರೂ ಉರ್ದು ಹಾಗು ಮೋಡಿಗಳನ್ನು ಸ್ವಪ್ರಯತ್ನದಿಂದ ಕಲಿತರು. ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತಗಳೆಂದರೆ ತುಂಬಾ ಪ್ರೀತಿ. ಅಭಿನಯದಲ್ಲಿಯೂ ತುಂಬಾ ಆಸಕ್ತಿಯಿದ್ದುದರಿಂದ ರಾಮಾಯಣ, ಮಹಾಭಾರತ, ಅಲ್ಲಮ ಪ್ರಭು ಬಯಲಾಟಗಳಲ್ಲಿ ಪಾತ್ರವಹಿಸಿ ಪ್ರೇಕ್ಷಕರ ಕಣ್ಮನಗಳನ್ನು ತಣಿಸುತ್ತಿದ್ದರು. ಜಾತ್ರೆ ಉತ್ಸವ ಮೊದಲಾದವುಗಳಲ್ಲಿ ಅನುಭಾವ ಕವಿಗಳಾದ ಸರ್ವಜ್ಞ, ನಿಜಗುಣಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಜನ್ಮ ಮುಸ್ಲೀಂ ಕುಟುಂಬದಲ್ಲಾದರೂ, ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯ ಬೆರೆತುಹೋಯಿತು. ಮತ್ತೊಂದೆಡೆ ಇಸ್ಲಾಂ ಹಬ್ಬಗಳಾದ ಮೊಹರಂ ಹಬ್ಬದಲ್ಲಿ ಮತ್ತು ಅದರ ಭಾಗವಾದ ಅಲಾವಿ, ಕರ್ಬಲಾ ಆಚರಣೆಗಳಲ್ಲಿ ಭಾಗವಹಿಸುತ್ತಿದ್ದರು. ಶರೀಫರು ಪ್ರಾಯಕ್ಕೆ ಬಂದ ಮೇಲೆ ಶಿಶುನಾಳ ಗ್ರಾಮದ ನೆರೆಯ ಹಳ್ಳಿಯೊಂದರಲ್ಲಿ ಕನ್ನಡ ಉಪಾಧ್ಯಾಯರಾಗಿ ಕೆಲವು ದಿನ ಕೆಲಸ ಮಾಡಿದರು. ಉಪಾಧ್ಯಾಯರಾಗಿದ್ದಾಗಲೇ ಅವರ ವಿವಾಹವು ಕುಂದಗೋಳದ ಫಕೀರ ಸಾಹೇಬರ ಜ್ಯೇಷ್ಠ ಪುತ್ರಿ ಫಾತಿಮರೊಂದಿಗೆ ಆಯಿತು. ಕೆಲಕಾಲದ ನಂತರ ಅವರಿಗೆ ಹುಟ್ಟಿದ ಏಕೈಕ ಪುತ್ರಿಯು ಕಾಲರಾ ರೋಗಕ್ಕೆ ಬಲಿಯಾದಳು. ಶರೀಫರ ನಡು ಹರೆಯದಲ್ಲಿಯೇ ಮಡದಿಯೂ ತೀರಿ

CCE RR/PR/PF

ಹೋದಳು. ಮಗಳ ಮತ್ತು ಹೆಂಡತಿಯ ಮರಣಗಳಿಂದ ಶರೀಫರಿಗೆ ಸಹಿಸಲಾಗದ ಆಘಾತವಾಯಿತು. ಆದರೂ ಧೃತಿಗೆಡದೆ ಶರೀಫರು ತಮಗಾದ ದುಃಖವನ್ನು ಸಾಧು ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ದೇವರ ಧ್ಯಾನ ಹಾಗು ಉಪಾಸನೆಗಳಲ್ಲಿ ತಮ್ಮ ಹೃದಯಕ್ಕಾದ ಪೆಟ್ಟನ್ನು ಮರೆಯಲು ಹವಣಿಸುತ್ತಿದ್ದರು. ಶರೀಫರು ಗುರು ಕೃಪೆಯನ್ನು ಪಡೆಯಲು ಮಠ ಮಂದಿರಗಳಿಗೆ ಹೋಗುತ್ತಿದ್ದರು. ಗುರುವಿಗಾಗಿ ತಡಕಾಡುತ್ತಿರುವ ಈ ಭಕ್ತ ಜೀವಕ್ಕೆ ದೇವರು ಫಲವನ್ನೀಯದಿರಲಿಲ್ಲ. 'ಗುರುಗೋವಿಂದ ಭಟ್ಟ'ರೆಂಬ ಆದರ್ಶ ಗುರುಗಳು ಶರೀಫರಿಗೆ ದೊರಕಿದರು.

ಪ್ರಶ್ನೆಗಳು :

ಅ) ಶರೀಫರ ಬದುಕಿನಲ್ಲಿ ಆಘಾತವನ್ನುಂಟು ಮಾಡಿದ ಘಟನೆಗಳಾವುವು ?

ಆ) ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತು ಹೋಗಿತ್ತು ?

CCE RR/PR/PF

XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4

37. ಆರೋಗ್ಯ ಸುಧಾರಣೆಯಲ್ಲಿ ಯೋಗದ ಮಹತ್ವ.

ಅಥವಾ

ಪರಿಸರ ಸಂರಕ್ಷಣೆ ಇಂದಿನ ಅಗತ್ಯತೆ.

XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **1 × 5 = 5**

38. ನಿಮ್ಮನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ 'ಶಿವಗಂಗೆ' ಗ್ರಾಮದ ನಿವಾಸಿ 'ಜ್ಯೋತಿ' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮಕ್ಕೆ ಅಗತ್ಯವಾಗಿ ಸಾರಿಗೆ ಬಸ್ಸುಗಳ ಸೌಲಭ್ಯವನ್ನು ಕಲ್ಪಿಸಿಕೊಡುವಂತೆ ಕೋರಿ 'ಕರ್ನಾಟಕ ರಸ್ತೆ ಸಾರಿಗೆ ನಿಗಮ' ನೆಲಮಂಗಲ ಡಿಪೋ ವ್ಯವಸ್ಥಾಪಕರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಕುಸುಮ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಕೈಗೊಂಡ 'ಶೈಕ್ಷಣಿಕ ಪ್ರವಾಸ'ದ ಅನುಭವವನ್ನು ಕುರಿತು ಚಿತ್ರದುರ್ಗದ ಕೋಟೆಬೀದಿ ನಿವಾಸಿಯಾದ 'ಧೃತಿ' ಎಂಬ ನಿಮ್ಮ ಸ್ನೇಹಿತೆಗೆ ಒಂದು ಪತ್ರವನ್ನು ಬರೆಯಿರಿ.

CCE RR/PR/PF

33-K

DO NOT WRITE ANYTHING HERE